**Code No. 18 X**

# ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರೌಢ ದರ್ಜೆ — ಪ್ರಥಮ ಪತ್ರಿಕೆ

# (ವೇಗ)

ಜನವರಿ, 2018

ವೇಳೆ { ಉಕ್ತಲೇಖನ : 10 ನಿಮಿಷಗಳು
ವಿಸ್ತರಣೆ : 2 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರ ಅರವತ್ತು (260) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಶೀಘ್ರಲಿಪಿ ಟಿಪ್ಪಣಿಯನ್ನು ನಿಗದಿಪಡಿಸಿದ ಅವಧಿಯೊಳಗೆ ಲಿಪ್ಯಂತರ ಮಾಡಲು ಸೂಚಿಸತಕ್ಕದ್ದು.

---

ಸನ್ಮಾನ್ಯ ಸಭಾಧ್ಯಕ್ಷರೇ,

ಈ ಸಾಲಿನ ಆಯವ್ಯಯವನ್ನು ನಿಮ್ಮ
ಮೂಲಕ ರಾಜ್ಯದ ಜನತೆಯ ಮುಂದೆ
ಮಂಡಿಸುತ್ತಿದ್ದೇನೆ. ನಮ್ಮ ಸರ್ಕಾರಕ್ಕೆ
ಇನ್ನೆರಡು ತಿಂಗಳುಗಳಿಗೆ ಐದು ವರ್ಷ
$\frac{1}{4}$ ತುಂಬುವ ಈ ಸಂದರ್ಭ/ದಲ್ಲಿ ಮುಂದಿನ
ಆರ್ಥಿಕ ವರ್ಷದ ಮುನ್ನೋಟದ ಜತೆಯಲ್ಲಿ
ಸಾಧನೆಯ ಹಿನ್ನೋಟವನ್ನೂ ಕೂಡ
ಜನತೆಯ ಮುಂದಿಡುವುದು ನನ್ನ
ಕರ್ತವ್ಯವೆಂದು ಭಾವಿಸಿದ್ದೇನೆ. ನಮ್ಮದು
$\frac{1}{2}$ ಸರ್ವರನ್ನೂ ಒಳಗೊಂಡ ಮಾನವೀ/ಯ
ಮುಖವುಳ್ಳ ಸರ್ವೋದಯದ ಅಭಿವೃದ್ಧಿ
ಮಾದರಿ ಇದಕ್ಕೆ ಪೂರಕವಾಗಿ ಸಂವಿಧಾನದ
ಆಶಯಗಳಲ್ಲೊಂದಾದ ಸಾಮಾಜಿಕ ನ್ಯಾಯದ
ಪರಿಕಲ್ಪನೆಯ ವಿಸ್ತೃತ ಆರ್ಥಿಕ ವಿನ್ಯಾಸವನ್ನು
ಕಳೆದ/ ನಾಲ್ಕು ಆಯವ್ಯಯಗಳಲ್ಲಿ ನಾನು $\frac{3}{4}$
ಜನತೆಯ ಮುಂದಿಟ್ಟಿದ್ದೇನೆ. ಅದನ್ನು ಮತ್ತಷ್ಟು
ವಿಸ್ತರಿಸುವ, ಎತ್ತರಿಸುವ ಪ್ರಾಮಾಣಿಕ
ಪ್ರಯತ್ನವನ್ನು ಈ ಆಯವ್ಯಯದಲ್ಲಿ ಮಾಡಿದ್ದೇನೆ.
ಅಭಿವೃದ್ಧಿಯ ಫಲ ಜನXಜೀವನದಲ್ಲಿ 1
ಪ್ರತಿಫಲಿತವಾಗಬೇಕೆಂಬುದು ನನ್ನ ಬಯಕೆ.
ಇದೇ ನಮ್ಮ ಸರ್ಕಾರದ ಸಾಧನೆಯ
ನಿಜವಾದ ಮಾನದಂಡವೆಂದು ನಾನು
ನಂಬಿದ್ದೇನೆ. ಜನಾಭಿಪ್ರಾಯಕ್ಕೆ ನಮ್ಮದು
ಸದಾ ತೆರೆದ ಮನ/ಸ್ಸು. ಯೋಜನೆಗಳ $\frac{1}{4}$
ಫಲಾನುಭವಿಗಳ ಜತೆ 'ಜನಮನ'
ಕಾರ್ಯಕ್ರಮವೇ ಇದಕ್ಕೆ ಸಾಕ್ಷಿ. ಅಲ್ಲಿ
ವ್ಯಕ್ತವಾದ ಜನಾಭಿಪ್ರಾಯವನ್ನು ಗೌರವಿಸಿ
ಯೋಜನೆಗಳನ್ನು ಮಾರ್ಪಾಡು ಮಾಡಿ ಇನ್ನಷ್ಟು
ಜನೋಪಯೋಗಿ ಮಾ/ಡಿದ್ದೇವೆ. $\frac{1}{2}$

[ Turn over

ರಾಮರಾಜ್ಯವೆನ್ನುವುದು ಹಸಿವು ಮುಕ್ತ,
ಶೋಷಣೆ ಮುಕ್ತ, ಗಾಢ ಸಾಮರಸ್ಯದ,
ಸರ್ವಾಂಗೀಣ ಪ್ರಗತಿಯನ್ನು ಪ್ರತಿನಿಧಿಸುವ
ಒಂದು ಪರಿಕಲ್ಪನೆ. ಅಂಬೇಡ್ಕರ್ ರಚಿಸಿದ
$\frac{3}{4}$ ಸಂವಿಧಾನದ ಹಿಂದಿ/ನ ಪ್ರೇರಣೆಯಾಗಲಿ,
ನನ್ನ ಬದುಕೇ ನನ್ನ ಸಂದೇಶವೆಂದ
ಗಾಂಧೀಜಿಯ ಜೀವನವಾಗಲಿ, ಅಣ್ಣ ಬಸವಣ್ಣನ
ಆದರ್ಶವಾಗಲಿ ಇವೆಲ್ಲವೂ ಧ್ವನಿಸುವುದು
ಇದನ್ನೇ. ಹಾಗಾಗಿ ಸಾಮಾಜಿಕ ನ್ಯಾಯದ
2 ಪXರಿಕಲ್ಪನೆಯನ್ನು ವಿರೋಧಿಸುವವರು
ರಾಮರಾಜ್ಯವನ್ನು ನಿರ್ಮಿಸಲು ಸಾಧ್ಯವಿಲ್ಲ
ಎನ್ನುವುದು ನನ್ನ ಭಾವನೆ.

ಜನಪರ ಸರ್ಕಾರವೆಂದರೆ ಅಭಿವೃದ್ಧಿ
ವಿರೋಧಿ ಸರ್ಕಾರ ಎನ್ನುವಂಥ ಬಾಲಿಶವೂ,
$\frac{1}{4}$ ಸಂ/ಕುಚಿತವೂ ಆದ ಕಲ್ಪನೆಗಳು ಅದು
ಹೇಗೋ ವಿತ್ತೀಯ ವಲಯದಲ್ಲಿ
ನುಸುಳಿಬಿಟ್ಟಿವೆ ಆದರೆ, ಅಂಥದ್ದೊಂದು
ಸುಳ್ಳನ್ನು ಒಡೆದು ಹಾಕುವಲ್ಲಿ ನಮ್ಮ ಸರ್ಕಾರ
ಯಶಸ್ವಿಯಾಗಿದೆ. ಯಾವ ಸರ್ಕಾರವನ್ನು
$\frac{1}{2}$ ಜ/ನಪರ ಸರ್ಕಾರ ಎಂದು ಜನಸಾಮಾನ್ಯರು
ಗುರುತಿಸುತ್ತಾರೋ ಅದೇ ಸರ್ಕಾರದ
ಆಡಳಿತ, ನೀತಿ–ನಿರೂಪಣೆಗಳೇ ಬೆಂಗಳೂರನ್ನು
ಜಾಗತಿಕವಾಗಿ ಅತ್ಯಂತ ಕ್ರಿಯಾಶೀಲ ನಗರಿ
$\frac{3}{4}$ ಸ್ಥಾನಮಾನಕ್ಕೆ ಕೊಂ/ಡೊಯ್ಯಲು ಯಶಸ್ವಿ
ಯಾಗಿದೆ ಎನ್ನುವುದನ್ನು ವಿನಮ್ರತೆಯಿಂದ
ಹೇಳಬಯಸುತ್ತೇನೆ. ಯಾವ ಸರ್ಕಾರವನ್ನು
ಸಾಮಾಜಿಕ ನ್ಯಾಯದ ಪರ ಎಂದು
ಗುರುತಿಸಲಾಗುತ್ತಿದೆಯೋ ಅದೇ ಸರ್ಕಾರವೇ
ಇಂದು ಉದ್ದೇಶಿXತ ಬಂಡವಾಳ 3
ಹೂಡಿಕೆಯಲ್ಲಿ ರಾಜ್ಯವನ್ನು ರಾಷ್ಟ್ರದಲ್ಲಿಯೇ
ಮೊದಲ ಸ್ಥಾನದಲ್ಲಿ ಒಯ್ದು ನಿಲ್ಲಿಸಿದೆ
ಎನ್ನುವುದನ್ನು ಮರೆಯಬಾರದು.

ಮೂಲಸೌಕರ್ಯ ಕಲ್ಪಿಸುವುದೇ
ಅಭಿವೃದ್ಧಿ ಎಂದುಕೊಂಡಿರುವ ಒಂದು/ $\frac{1}{4}$
ವರ್ಗ ನಮ್ಮಲ್ಲಿದೆ. ಅದು ಕೇವಲ ಆಂಶಿಕ
ಸತ್ಯ ಅದೇನೇ ಇರಲಿ, ಹೀಗೆ
ನಂಬಿಕೊಂಡಿರುವ ವರ್ಗಕ್ಕೂ ಇಂದು ನಮ್ಮ
ಸರ್ಕಾರದ ಸಾಧನೆಯು ಬಗ್ಗೆ ಹೆಚ್ಚಿನ
ಆಕ್ಷೇಪಣೆಗಳಿರಲಾರದು. ನಮ್ಮ ಸರ್ಕಾರ/ದ $\frac{1}{2}$
ಅವಧಿಯಲ್ಲಿ ಬೆಂಗಳೂರು ಹಾಗೂ ರಾಜ್ಯದ
ಮೂಲಸೌಕರ್ಯ ಕುರಿತಾದ ಯೋಜನೆಗಳು
ಹಾಳೆಗಳ ಮೇಲೆ ಉಳಿದಿಲ್ಲ. ಬದಲಾಗಿ ಜನರ
ಕಣ್ಣೆದುರಿಗಿವೆ ಬೆಂಗಳೂರಿನ ಮೆಟ್ರೋ
ಸಾರಿಗೆಯಾಗಲಿ/ ಪ್ರಶಸ್ತಿಗಳ ಮೇಲೆ ಪ್ರಶಸ್ತಿ $\frac{3}{4}$
ಪಡೆಯುತ್ತಿರುವ ರಾಜ್ಯ ರಸ್ತೆ ಸಾರಿಗೆ
ಸಂಸ್ಥೆಯಾಗಲಿ, ರಾಜ್ಯದ ಉದ್ದಗಲಕ್ಕೂ
ಹುಬ್ಬೇರುವಂತೆ ಮೇಲ್ದರ್ಜೆಗೇರಿಸಲ್ಪಟ್ಟಿರುವ
ರಾಜ್ಯ ಹೆದ್ದಾರಿಗಳೇ ಆಗಲಿ, ರಾಜ್ಯಾದ್ಯಂತX 4
ತಲೆ ಎತ್ತುತ್ತಿರುವ ಕೈಗಾರಿಕಾ ಪಾರ್ಕುಗಳೇ
ಇರಲಿ, ಇವೆಲ್ಲ ಸಾರಿ ಹೇಳುವ ಅಭಿವೃದ್ಧಿ
ಚಹರೆಯನ್ನು ಸುಲಭದಲ್ಲಿ ಯಾರೂ
ಅಲ್ಲಗಳೆಯಲಾಗದು.

ಯಾವ ನಾಡಿನಲ್ಲಿ ಮಹಿಳೆಯರು
ಮತ್ತು ಮಕ್ಕ/ಳನ್ನು ಅಭಿವೃದ್ಧಿಯ $\frac{1}{4}$

ಕೇಂದ್ರಕ್ಕೆ ಬರಮಾಡಿಕೊಳ್ಳಲಾಗುತ್ತದೋ ಆ ನಾಡಿನ ಭವಿಷ್ಯಕ್ಕೆ ಅಂಧಕಾರವೆನ್ನುವುದು ಸುಳಿಯುವುದಿಲ್ಲ. ಇಂದು ಪ್ರತಿಷ್ಠಿತ ಖಾಸಗಿ ಸಂಸ್ಥೆಗಳು ಸಹ ರಾಜ್ಯವು ಮಹಿಳಾ

$\frac{1}{2}$ ಸಬ/ಲೀಕರಣದಲ್ಲಿ, ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಕೈಗೊಂಡಿರುವ ಕ್ರಮಗಳ ಬಗ್ಗೆ ಮುಕ್ತವಾಗಿ ಪ್ರಸಂಶಿಸುತ್ತಿವೆ. ಅಂತರರಾಷ್ಟ್ರೀಯ ಸಂಸ್ಥೆಯೊಂದು ಮಹಿಳಾ ಉದ್ಯಮಿಗಳನ್ನು

$\frac{3}{4}$ ಪ್ರೋತ್ಸಾಹಿಸುವಲ್ಲಿ/ ಪ್ರಶಸ್ತಿಯನ್ನು ನೀಡಿದೆ ಎನ್ನುವುದನ್ನು ಸದನದ ಗಮನಕ್ಕೆ ತರಲು ಬಯಸುತ್ತೇನೆ. ಇದುವೇ ನಮ್ಮ ಅಭಿವೃದ್ಧಿಯ ಚಹರೆ ಎಂದು ಹೇಳಿಕೊಳ್ಳಲು ನನಗೆ

5 ಹೆಮ್ಮೆಯಿದೆ. ಈ ನಾಡನ್ನು, ಸಮಾಜವನ್ನುX ಜತನದಿಂದ ಕಟ್ಟುವಲ್ಲಿ ಮಗಳಾಗಿ, ತಾಯಿಯಾಗಿ, ಅಕ್ಕತಂಗಿಯರಾಗಿ ಹೆಣ್ಣುಮಕ್ಕಳಿಗಿರುವ ಬದ್ಧತೆ ಪ್ರಶ್ನಾತೀತವಾದುದು. ಹಾಗಾಗಿಯೇ ನಮ್ಮ ಆರ್ಥಿಕ ನೀತಿ ನಿರೂಪಣೆಗಳ ವಿಷಯದಲ್ಲಿ

$\frac{1}{4}$ ಲಿಂ/ಗಾಧಾರಿತ ಅಸಮಾನತೆಯನ್ನು ತೊಡೆದು ಸಮಾನ ಆಯ್ಕೆ, ಅವಕಾಶಗಳನ್ನು ನೀಡುವ ಲಿಂಗಸಂವೇದಿ ಗುಣ ಗಾಢವಾಗಿ ಕಂಡುಬರುತ್ತದೆ.

ಕಳೆದ ಐದು ವರ್ಷಗಳ ನಮ್ಮ ಹಾದಿ

$\frac{1}{2}$ ಹೂವಿನ ಹಾಸಿಗೆ/ಯಾಗಿರಲಿಲ್ಲ. ಕಳೆದೆರಡು ವರ್ಷಗಳ ನಿರಂತರ ಬರಗಾಲ, ಇತ್ತೀಚಿನ ನೋಟು ಅಮಾನ್ಯೀಕರಣದಿಂದಾಗಿ ಕುಂಠಿತಗೊಂಡ ಆರ್ಥಿಕ ಚಟುವಟಿಕೆಯಿಂದಾದ ನಷ್ಟವೂ

$\frac{3}{4}$ ಸೇರಿದಂತೆ ಎದುರಾದ ಪ್ರ/ತಿಕೂಲಗಳನ್ನು ಆರ್ಥಿಕ ಶಿಸ್ತು, ಸಂಪನ್ಮೂಲ ಸಂಗ್ರಹಣೆಯ ಬದ್ಧತೆ ಮತ್ತು ದಕ್ಷ ಆಡಳಿತದ ಮೂಲಕ ಎದುರಿಸುತ್ತಾ ಬಂದಿದ್ದೇವೆ. ರಾಜ್ಯದ ಒಟ್ಟಾರೆ

ಆಂತರಿಕ ಉತ್ಪನ್ನವು ಕಳೆದ ಸಾಲಿಗಿಂತಲೂX 6

ಹೆಚ್ಚಾಗಿ ಗಣನೀಯವಾಗಿ ಬೆಳವಣಿಗೆಯಾಗಿದೆ. ಕೃಷಿ ವಲಯವು ಇನ್ನೂ ಬೆಳವಣಿಗೆ ಹೊಂದುವ ನಿರೀಕ್ಷೆಯಿದ್ದು ಕೈಗಾರಿಕಾ ಹಾಗೂ ಸೇವಾವಲಯದಲ್ಲಿ ಬೆಳವಣಿಗೆ ಕುಂಠಿತ

ಗೊಂಡಿರು/ವುದು ಕಳೆದ ಸಾಲಿನ ರಾಜ್ಯದ $\frac{1}{4}$

ಒಟ್ಟಾರೆ ಆಂತರಿಕ ಉತ್ಪನ್ನ ಬೆಳವಣಿಗೆಯ ದರವು ಕಡಿಮೆಯಾಗುವುದಕ್ಕೆ ಕಾರಣವಾಗಿದೆ.

ಯಾವುದೇ ಸಾರ್ವಜನಿಕ ನೀತಿಯು

ನಿಗದಿತ ಗುರಿಯನ್ನು ಸಾಧಿ/ಸುವ ಉದ್ದೇಶದ $\frac{1}{2}$

ಜೊತೆಗೆ ಅದನ್ನು ಕಾರ್ಯಗತಗೊಳಿಸುವಲ್ಲಿ ಸಮರ್ಥವಾಗಿರಬೇಕು. ಅಪಮೌಲ್ಯೀಕರಣವು ಜನಸಾಮಾನ್ಯರಿಗೆ ಅಪಾರ ಸಂಕಷ್ಟ ಉಂಟು ಮಾಡಿದ್ದು, ಅದರಿಂದ ಸಾಧಿಸಿದ

ಫಲಶೃ/ತಿಯೇನು ಎಂಬುದನ್ನು ತಿಳಿಸಬೇಕಾಗಿದೆ. $\frac{3}{4}$

ಕೇಂದ್ರ ಸರ್ಕಾರ ಜನಸಾಮಾನ್ಯರಿಗೆ ಯಾವುದೇ ತೊಂದರೆಗಳಾಗದಂತೆ ಸಶಕ್ತವಾದ ವ್ಯವಸ್ಥೆಯನ್ನು ಆಚರಣೆಗೆ ತರಬೇಕಿತ್ತು ಎಂಬುದು ನನ್ನ

ಅನಿಸಿಕೆ.X 7

ಮಾನ್ಯರೆ,

ನಮ್ಮ ವಿಭಾಗದ ಪ್ರಾದೇಶಿಕ ಕಚೇರಿಯಲ್ಲಿ ಖಾಲಿ ಇದ್ದ ಕೆಲವು ವ್ಯವಸ್ಥಾಪಕರು, ಶೀಘ್ರಲಿಪಿಗಾರರು ಹಾಗೂ ಬೆರಳಚ್ಚುಗಾರರುಗಳ ಹುದ್ದೆಗಳು ಖಾಲಿ ಇರುವುದಾಗಿಯೂ,

ಅವುಗಳ/ನ್ನು ಸಾಮಾನ್ಯ ವರ್ಗಾವಣೆ $\frac{1}{4}$

ಸಮಯದಲ್ಲಿ ನಿಯೋಜನೆಯ ಮೇರೆಗೆ

ಕಾಲೇಜು ಶಿಕ್ಷಣ ಇಲಾಖೆಯಿಂದ ಭರ್ತಿ
ಮಾಡಬೇಕೆಂದು ತಮಗೆ ಪತ್ರದ ಮೂಲಕ
ಕೋರಿಕೆಯನ್ನು ಸಲ್ಲಿಸಿದ್ದೆವು. ಅದರಂತೆ,
$\frac{1}{2}$ ಸಾಮಾನ್ಯ/ ವರ್ಗಾವಣೆಯ ಮಾರ್ಗಸೂಚಿಯಂತೆ
ಸರ್ಕಾರಿ ಆದೇಶವನ್ನು ಹೊರಡಿಸಿ ಖಾಲಿ
ಹುದ್ದೆಗಳಿಗೆ ನೌಕರರನ್ನು ವರ್ಗಾಯಿಸಲಾಗಿದೆ.
ಅದರ ಪ್ರಕಾರ, ಸಂಬಂಧಿಸಿದ ನೌಕರರು
$\frac{3}{4}$ ಪ್ರಾದೇಶಿಕ ಕಚೇರಿಯ/ಲ್ಲಿ ಸಂಬಂಧಪಟ್ಟ
ಹುದ್ದೆಗಳಲ್ಲಿ ಕರ್ತವ್ಯಕ್ಕೆ ವರದಿ
ಮಾಡಿಕೊಂಡಿರುತ್ತಾರೆ. ತದನಂತರ, ವರದಿ
ಮಾಡಿಕೊಂಡ ನೌಕರರ ಬಗ್ಗೆ ತಿಳಿಸಿ. ಅವರುಗಳ
ಅಂತಿಮ ವೇತನ ಪ್ರಮಾಣ ಪತ್ರ ಮತ್ತು
8 ಸೇXವಾ ಪುಸ್ತಕಗಳನ್ನು ಪತ್ರ ತಲುಪಿದ
ಹದಿನೈದು ದಿನಗಳೊಳಗಾಗಿ ಪ್ರಾದೇಶಿಕ
ಕಚೇರಿಗೆ ಕಳುಹಿಸಲು ತಿಳಿಸಿದ್ದೆವು. ಆದರೆ ಸದರಿ
ನೌಕರರು ವರದಿ ಮಾಡಿಕೊಂಡು ನಾಲ್ಕು
$\frac{1}{4}$ ತಿಂಗಳು ಕ/ಳೆದರೂ ಅವರುಗಳ ಸೇವಾ
ಪುಸ್ತಕಗಳು ಈ ಕಚೇರಿಗೆ ಬಂದಿರುವುದಿಲ್ಲ. ಈ
ಬಗ್ಗೆ ತಮಗೆ ಅನೇಕ ಬಾರಿ ಪತ್ರಗಳನ್ನು
ಬರೆದಿದ್ದು, ಆದರೆ, ಇದುವರೆವಿಗೂ ತಮ್ಮಿಂದ
$\frac{1}{2}$ ಯಾವುದೇ ಉತ್ತರ ಬಂ/ದಿರುವುದಿಲ್ಲ ಅಥವಾ
ಸೇವಾ ಪುಸ್ತಕಗಳನ್ನೂ ಸಹ ಕಳುಹಿಸಿರುವುದಿಲ್ಲ
ಇದು ತುಂಬಾ ವಿಷಾಧನೀಯ.

ನೌಕರರ ಸೇವಾ ಪುಸ್ತಕಗಳಿಲ್ಲದೆ ಕಚೇರಿ
$\frac{3}{4}$ ಕೆಲಸಗಳಲ್ಲಿ ತುಂಬಾ ಅಡಚಣೆ ಉಂಟಾಗಿದೆ./
ನೌಕರರು ತಮ್ಮ ಹಕ್ಕಿನ ಸೌಲಭ್ಯಗಳನ್ನು
ಉಪಯೋಗಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ.
ಸೇವಾ ಪುಸ್ತಕಗಳಿಲ್ಲದೆ ಇರುವುದರಿಂದ ಸದರಿ
ನೌಕರರ ಹಕ್ಕಿನಲ್ಲಿ ಇರುವ ರಜೆಗಳX 9
ವಿವರಗಳು ಸಿಗದೆ ರಜೆಗಳನ್ನು ಮಂಜೂರು
ಮಾಡಲು ಆಗುತ್ತಿಲ್ಲ. ಅದೂ ಅಲ್ಲದೆ ಸೇವಾ
ಪುಸ್ತಕ ಇಲ್ಲದಿರುವುದರಿಂದ ಸರ್ಕಾರಿ ನೌಕರರಿಗೆ
ದೊರಕುವ ವಾರ್ಷಿಕ ವೇತನ ಬಡ್ತಿ,
ಕಾಲಮಿತಿ/ ಬಡ್ತಿ, ಗಳಿಕೆ ರಜೆ ನಗದೀಕರಣ $\frac{1}{4}$
ಸೌಲಭ್ಯ, ಸ್ವಗ್ರಾಮ ಪ್ರವಾಸ ರಿಯಾಯಿತಿ
ಇನ್ನೂ ಮುಂತಾದ ಸೌಲಭ್ಯಗಳನ್ನು
ಪಡೆಯಲು ಸಾಧ್ಯವಾಗುತ್ತಿಲ್ಲ. ಆದಕಾರಣ
ಈ ಬಗ್ಗೆ ಸಂಬಂಧಿಸಿದ ನೌಕರರು ಮೇ/ಲಿನ $\frac{1}{2}$
ಅಧಿಕಾರಿಗಳಿಗೆ ಪತ್ರ ಬರೆದು ಸೇವಾ
ಪುಸ್ತಕಗಳನ್ನು ಪಡೆಯಬೇಕೆಂದು ಮನವಿಯನ್ನು
ಸಲ್ಲಿಸಿರುತ್ತಾರೆ.

ಆದುದರಿಂದ ತಾವು ಮೇಲಿನ ವಿಷಯದ
ಬಗ್ಗೆ ತಮ್ಮ ವೈಯಕ್ತಿಕ ಗಮನಹ/ರಿಸಿ ಆದಷ್ಟು $\frac{3}{4}$
ಜಾಗ್ರತೆ ಸೇವಾ ಪುಸ್ತಕಗಳನ್ನು ಪ್ರಾದೇಶಿಕ
ಕಚೇರಿಗೆ ಕಳುಹಿಸಲು ಕ್ರಮಕೈಗೊಳ್ಳಬೇಕೆಂದು
ಕೋರಿದೆ.

ತಮ್ಮ ವಿಶ್ವಾಸಿ,
ಪ್ರಾದೇಶಿಕ ಜಂಟಿ ನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆ.X 10